ಡಾ : ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಹಿರೇಕೆರೂರು ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು ಪ್ರಸ್ತುತ 26 ಹಾಸಿಗೆಗಳಿಂದ 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿ ಪಡಿಸಲಾಗುವುದು.

ಆ) ರೂ. 97 ಲಕ್ಷ ಅಂದಾಜು ವೆಚ್ಚದ ನಕ್ಷೆ ಮತ್ತು ಅಂದಾಜುಪಟ್ಟಿ ಅನುಮೋದನೆಗೊಂಡಿದೆ. ಈ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದ್ದು ಸ್ವೀಕೃತಿಗೆ 5.3.99 ಅಂತಿಮ ದಿನವಾಗಿರುತ್ತದೆ. ಈ ಕಾಮಗಾರಿಯು ಮೇ 1999 ರಲ್ಲಿ ಪ್ರಾರಂಭವಾಗುವುದು.

ದವಾಖಾನೆಗಳಿಗೆ ಔಷಧ ಪೂರೈಸಲು ನಿಗದಿಪಡಿಸದ ಮೊತ್ತದ ಬಗ್ಗೆ.

25(13) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) 1998-1999ನೇ ಸಾಲಿನಲ್ಲಿ ಸರ್ಕಾರದವರು ದವಾಖಾನೆಗಳಿಗೆ ಔಷಧ ಪೂರೈಸಲು ಆಯವ್ಯಯದಲ್ಲಿ ನಿಗದಿಪಡಿಸಿದ ಮೊತ್ತ ಹಾಗೂ ದಿನಾಂಕ: 28-02-1999 ರವರೆಗೆ ಬಿಡುಗಡೆ ಆದ ಹಣ ಎಷ್ಟು ಹಾಗೂ ಖರ್ಚಾದ ಹಣ ಎಷ್ಟು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

1) ರಾಜ್ಯ ವಲಯ ಆಯವ್ಯಯದಲ್ಲಿ ನಿಗದಿಪಡಿಸಲಾದ ಮೊತ್ತ ರೂ. 28,85,56,200-00 ಬಿಡುಗಡೆಯಾದ ಮೊತ್ತ ರೂ. 26,97,56,115-00 ದಿನಾಂಕ 28-02-1999ರ ಅಂತ್ಯಕ್ಕೆ ಖರ್ಚಾದ ಹಣ ರೂ. 4,78,15,089-00

ಶಿಕ್ಷಕರ ನೇಮಕಾತಿ ಕುರಿತು.

27(8) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಈ ವರ್ಷ ನೇಮಕ ಮಾಡಿಕೊಳ್ಳಲು ಉದ್ದೇಶಿಸಿರುವ ಶಿಕ್ಷಕರ ಸಂಖ್ಯೆ ಎಷ್ಟು?

ಆ) ವಯೋಮಿತಿ ಮೀರಿದವರಿಗೆ ಆದ್ಯತೆ ನೀಡಲಾಗುವುದೇ?

ಇ) ಯಾವಾಗ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು?